# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 558 |
| ಸದಸ್ಯರ ಹೆಸರು | : | ಶ್ರೀ ಕೆ.ಸಿ. ಕೊಂಡಯ್ಯ (ಸ್ಥಳೀಯ ಸಂಸ್ಥೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ: | : | 16.12.2021 |
| ಉತ್ತರಿಸಬೇಕಾದ ಸಚಿವರು | : | ಮುಖ್ಯಮಂತ್ರಿ |

****

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | ಬೆಂಗಳೂರು ಹೆಚ್.ಎಸ್.ಆರ್. ಬಡಾವಣೆಯ 6ನೇ ಸೆಕ್ಟರ್ ನಲ್ಲಿರುವ ನಿವೇಶನ ಸಂಖ್ಯೆ: 575/ಬಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಸ್ವತ್ತಾಗಿರುತ್ತದೆಯೇ; | ಹೆಚ್.ಎಸ್.ಆರ್. ಬಡಾವಣೆಯ 6ನೇ ಸೆಕ್ಟರ್‌ನಲ್ಲಿರುವ ನಿವೇಶನ ಸಂಖ್ಯೆ: 575/ಬಿ ಅನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಅನುಮೋದಿತ ನಕ್ಷೆಯಲ್ಲಿ ಅಳವಡಿಸಿಕೊಳ್ಳಲಾಗಿದ್ದು, ಮಾನ್ಯ ನ್ಯಾಯಾಲಯದ ಆದೇಶದಂತೆ ಸದರಿ ಸ್ವತ್ತಿಗೆ ನಿವೇಶನ ಸಂಖ್ಯೆ: 123 ಎಂದು ಕೇಂದ್ರೀಯ ಉಪಾಧ್ಯಯರ ಸಂಘದ ವತಿಯಿಂದ ಶ್ರೀಮತಿ ಉಷಾರೆಡ್ಡಿ ಎಂಬುವವರಿಗೆ ಹಂಚಿಕೆಯಾಗಿರುವುದಾಗಿ ತೀರ್ಪು ನೀಡಲಾಗಿರುತ್ತದೆ. |
| (ಆ) | ಹಾಗಿದ್ದಲ್ಲಿ, ಈ ನಿವೇಶವನ್ನು ಏತಕ್ಕಾಗಿ ಬಿ.ಡಿ.ಎ. ಸುಪರ್ದಿಗೆ ಪಡೆದುಕೊಂಡಿರುವುದಿಲ್ಲ ಮತ್ತು ಅಕ್ರಮವಾಗಿ ಕಟ್ಟಡ ಕಟ್ಟಿ ಅನಧಿಕೃತವಾಗಿ ಬಳಕೆ ಮಾಡಿಕೊಳ್ಳುತ್ತಿರುವವರ ವಿರುದ್ಧ ಏಕೆ ಕ್ರಮ ಕೈಗೊಂಡಿಲ್ಲ; | ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಹೆಚ್.ಎಸ್.ಆರ್. ಬಡಾವಣೆ 6ನೇ ಸೆಕ್ಟರ್ ನ ನಿವೇಶನ ಸಂಖ್ಯೆ: 575/ಬಿರ ಜಾಗವನ್ನು ಕೇಂದ್ರೀಯ ಉಪಾಧ್ಯಾಯರ ಸಂಘದವರು ಶ್ರೀಮತಿ ಉಷಾರೆಡ್ಡಿ ರವರಿಗೆ 40 x 60 ಅಳತೆ ನಿವೇಶನಗಳಾಗಿ ನಿವೇಶನ ಸಂಖ್ಯೆ: 123 ಎಂದು ಹಂಚಿಕೆ ಮಾಡಿರುತ್ತಾರೆ. ಸದರಿ ನಿವೇಶನವನ್ನು ಕೇಂದ್ರೀಯ ಉಪಾಧ್ಯಾಯರ ಸಂಘದವರು ಹಂಚಿಕೆ ಮಾಡಿರುವ ಸಂಬಂಧ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ OS No 2536/2000 ರಲ್ಲಿ ದಾವೆ ದಾಖಲಿಸಿದ್ದು, ಸದರಿ ದಾವೆಗೆ ನ್ಯಾಯಾಲಯವು ದಿನಾಂಕ: 22.04.2006ರಲ್ಲಿನ ಆದೇಶದಲ್ಲಿ ಕೇಂದ್ರೀಯ ಉಪಾಧ್ಯಾಯರ ಸಂಘದಿಂದ ಹಂಚಿಕೆ ಪಡೆದಿರುವ ಸ್ವತ್ತಿನ ಮಾಲೀಕರ ಪರವಾಗಿ ತೀರ್ಪು ನೀಡಿದ್ದು, ಈ ಆದೇಶದ ಮೇಲೆ ಪ್ರಾಧಿಕಾರದ ವತಿಯಿಂದ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ RFA No: 1380/2016 ರಲ್ಲಿ ಮೇಲ್ಮನವಿ ಸಲ್ಲಿಸಲಾಗಿ, ಮಾನ್ಯ ಉಚ್ಚ ನ್ಯಾಯಾಲಯವು ಸಿವಿಲ್ ನ್ಯಾಯಾಲಯದ ಆದೇಶವನ್ನು ಎತ್ತಿಹಿಡಿದಿರುತ್ತದೆ. ನ್ಯಾಯಾಲಯದ ಆದೇಶದಂತೆ ಸದರಿ ನಿವೇಶನವನ್ನು ಪ್ರಾಧಿಕಾರದ ವಶಕ್ಕೆ ತೆಗೆದುಕೊಳ್ಳಲು ಸಾಧ್ಯವಾಗಿರುವುದಿಲ್ಲ. |
| (ಇ) | ಅನಧಿಕೃತ ಬಳಕೆಗೆ ಬಿ.ಡಿ.ಎ.ಯ ಎಕ್ಸಿಕ್ಯೂಟಿವ್ ಇಂಜಿನಿಯರ್ ಹಾಗೂ ಇತರೆ ಅಧಿಕಾರಿಗಳು ಶಾಮೀಲಾಗಿರುವುದು ಮೇಲ್ನೋಟಕ್ಕೆ ಕಂಡುಬಂದಿದ್ದು, ಸರ್ಕಾರ ಈ ಅಧಿಕಾರಿಗಳ ಬಗ್ಗೆ ಕೂಡಲೇ ಕ್ರಮ ಕೈಗೊಳ್ಳುವುದೇ? | ಸದರಿ ವಿಷಯದಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಯಾವುದೇ ಅಧಿಕಾರಿಗಳು ಶಾಮೀಲಾಗಿರುವುದಿಲ್ಲ. |

ನಅಇ 235 ಬೆಂಭೂಸ್ವಾ 2021

(ಬಸವರಾಜ ಬೊಮ್ಮಾಯಿ)

ಮುಖ್ಯಮಂತ್ರಿ